**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಸಿ.ಸಿ. ನಂಃ714/2019 ಪಿ.ಡಬ್ಲೂ: 01**

ಸಾಕ್ಷಿಯನ್ನು ಇಂದು ದಿನಾಂಕಃ **27.06.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟಿ ಸವಾಲುಃ** ಆರೋಪಿ ಪರ ಶ್ರೀ ಎಸ್.ಸಿ.ಎಸ್ ವಕೀಲರಿಂದಃ

ನಾನು ಕಂಪ್ಯೂಟರ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾವು ಮೈಸೂರುನ್ನು ದಿನಾಂಕ **12.08.2019** ರಂದು ಬೆಳಿಗ್ಗೆ **10.30** ಗಂಟೆಗೆ ಬಿಟ್ಟಿರುತ್ತೇವೆ. ನನ್ನ ವಾಹನದ ಎರಡು ಕಡೆ ಕನ್ನಡಿ ಇರುತ್ತದೆ. ನಾವು ಬನ್ನೂರು ಮಾರ್ಗವಾಗಿ ಶಿವನಸಮುದ್ರಕ್ಕೆ ಹೋಗುತ್ತಿದ್ದೆವು. ಸದರಿ ದಿನ ಸದರಿ ರಸ್ತೆಯಲ್ಲಿ ರಸ್ತೆ ಕಾಮಗಾರಿ ನಡೆಯುತ್ತಿತ್ತು ಎಂದರೆ ಸರಿ. ಸದರಿ ರಸ್ತೆ **20** ಅಡಿ ಅಗಲ ಇರುತ್ತದೆ ಎಂದರೆ ಸರಿ. ರಸ್ತೆಯ ಅರ್ಧ ಭಾಗದಲ್ಲಿ ಕೆಲಸ ನಡೆಯುತ್ತಿದ್ದು, ಉಳಿದ ಅರ್ಧ ಭಾಗದಲ್ಲಿ ವಾಹನ ಚಾಲನೆ ಇತ್ತು ಎಂದರೆ ಸರಿ. ರಸ್ತೆಯ ಎಡಭಾಗದಲ್ಲಿ ಮಣ್ಣಿನ ಗುಡ್ಡೆಗಳು ಇದ್ದವು ಎಂದರೆ ರಸ್ತೆಯ ಎದುರು ಮಣ್ಣಿನ ಗುಡ್ಡೆಗಳು ಇದ್ದವು ಎಂದು ನುಡಿಯುತ್ತಾರೆ. ಸದರಿ ಅರ್ಧ ಭಾಗದ ರಸ್ತೆಯಲ್ಲಿ ಮೈಸೂರಿನಿಂದ ಹೋಗುವ ವಾಹನಗಳು ಹಾಗೂ ಬನ್ನೂರಿನಿಂದ ಬರುವ ವಾಹನಗಳು ಓಡಾಡುತ್ತಿದ್ದವು ಎಂದರೆ ಸರಿ. ಸದರಿ ರಸ್ತೆಯಲ್ಲಿ ವಾಹನ ದಟ್ಟಣೆ ಇರುತ್ತದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ರಸ್ತೆ ಕಾಮಗಾರಿ ನಡೆಯುತ್ತಿದ್ದ ಕಾರಣ ಎಲ್ಲಾ ವಾಹನಗಳು ನಿಧಾನವಾಗಿ ಹೋಗುತ್ತಿದ್ದವು ಎಂದರೆ ನಾವು ನಿಧಾನವಾಗಿ ಹೋಗುತ್ತಿದ್ದೆವು ಎಂದು ನುಡಿಯುತ್ತಾರೆ. ರಸ್ತೆಯ ಮುಂದೆ ಮಣ್ಣಿನ ಗುಡ್ಡೆ ಇರುವ ಕಾರಣ ನಾನು ಏಕಾಏಕಿ ನನ್ನ ವಾಹನವನ್ನು ಬಲಕ್ಕೆ ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ವಾಹನವನ್ನು ಬಲಕ್ಕೆ ತೆಗೆದುಕೊಳ್ಳುವಾಗ ಹಿಂದೆ ಅಥವಾ ಮುಂದೆ ಬರುತ್ತಿದ್ದ ವಾಹನಗಳನ್ನು ಗಮನಿಸದೇ ವಾಹನವನ್ನು ಬಲಕ್ಕೆ ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ಏಕಾಏಕಿ ಬಲಕ್ಕೆ ನನ್ನ ವಾಹನವನ್ನು ತೆಗೆದುಕೊಂಡ ಕಾರಣ ನಾನೇ ಹೋಗಿ ಆರೋಪಿಯ ವಾಹನಕ್ಕೆ ಡಿಕ್ಕಿ ಹೊಡೆದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ತನ್ನ ವಾಹನವನ್ನು ನಿಧಾನವಾಗಿ ಚಲಾಯಿಸಿಕೊಂಡು ಬರುತ್ತಿದ್ದು, ನಾನು ಏಕಾಏಕಿ ನನ್ನ ವಾಹನವನ್ನು ಬಲಕ್ಕೆ ತೆಗೆದುಕೊಂಡಿರುವ ಕಾರಣ ನನ್ನ ನಿರ್ಲಕ್ಷತನದಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯುವ ಸಲುವಾಗಿ ನನ್ನ ತಪ್ಪಿದ್ದರೂ ಸಹ ಆರೋಪಿಯ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಪಂಚನಾಮೆಯನ್ನು ಅಪಘಾತದ ದಿನವೇ ಮಾಡಿರುತ್ತಾರೆ. ಪಂಚನಾಮೆಗೆ ಪೊಲೀಸರು ಬಂದಿದ್ದರು. ಪಂಚನಾಮೆಗೆ ಅಪಘಾತವನ್ನು ನೋಡಿದ ಸಾಕ್ಷಿಗಳು ಸಹಿ ಮಾಡಿರುತ್ತಾರೆ. ಸದರಿಯವರ ಹೆಸರು ರೇವಣ್ಣ ಮತ್ತು ಪ್ರಸನ್ನ ಎಂದು ಇರುತ್ತದೆ. ಸದರಿಯವರು ಅಲ್ಲಿಯೇ ಕೆಲಸ ಮಾಡುತ್ತಿದ್ದರು. ಸದರಿಯವರು ಬನ್ನೂರಿನ ನಿವಾಸಿಗಳಾಗಿರುತ್ತಾರೆ. ರಸ್ತೆ ಕಿರಿದ್ದಾಗಿದ್ದು, ಮಣ್ಣಿನ ಗುಡ್ಡೆ ರಸ್ತೆಯ ಎದುರಿನಲ್ಲಿ ಇದ್ದ ಕಾರಣ ನಾನು ನನ್ನ ವಾಹನವನ್ನು ಏಕಾಏಕಿ ಬಲಕ್ಕೆ ತೆಗೆದುಕೊಂಡಿರುವ ಕಾರಣ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲಃ</u>

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**